ಸಂಶೋಧನೆ ಮತ್ತು ಅಭಿವೃದ್ಧಿ ಕೆಲವೇ ಮಂದಿಯ ಸೊತ್ತು ಅಂದುಕೊಳ್ಳಬೇಡಿ. ಆಯ್ದ ಕ್ಷೇತ್ರಗಳಲ್ಲಿ ಅವಿರತ ದುಡಿಯುವ ಅಸಾಮಾನ್ಯರ ಬುದ್ಧಿಗೂಸು(ಬ್ರೈನ್ ಚೈಲ್ಡ್) ಅಂದುಕೊಳ್ಳುವುದೂ ಬೇಡ. ಯಾಕೆಂದರೆ ನಾನೂ ಹಾಗೇ ಅಂದುಕೊಂಡಿದ್ದೆ. ಸ್ವತಂತ್ರ ಠಾಣಾಧಿಕಾರಿಯಾಗಿ ಠಾಣೆಯ ಹೊಸ್ತಿಲು ಮೆಟ್ಟುವವರೆಗೆ.

ನಾನು ಇನ್‌ಸ್ಪೆಕ್ಟರು ಅನ್ನಿಸಿಕೊಳ್ಳುವ ಹೊತ್ತಿಗೆ ಇಲಾಖೆ ಸೇರಿ ಹದಿನೈದು ವಸಂತಗಳನ್ನು ಕಂಡಿದ್ದಾಗಿತ್ತು. ಬೆಂಗಳೂರಿನಂತಹ ಮಹಾನಗರದಲ್ಲಿ ಠಾಣಾಧಿಕಾರಿಯಾಗಿ ಸೇವೆಗೈಯಬೇಕೆಂಬ ನನ್ನ ಕನಸು ಕೈಗೂಡಿದ್ದೂ ಒಂದು ಆಕಸ್ಮಿಕವೇ. ತದನಂತರದ ಕೆಲ ಬೆಳವಣಿಗೆಗಳು ನನ್ನಲ್ಲಿ ದಿಗಿಲು ಹುಟ್ಟಿಸಿ ಕೆಲವು ಕಾಲ ಕಂಗಾಲು ಮಾಡಿದ್ದೂ ನಿಮ್ಮಾಣೆಗೂ ನಿಜ.

ಸಂಶೋಧನೆ ಮಾಡುವ ಸಮ್‌ಶೋಧಕರು ವಂಚನಾ ಜಗತ್ತಿನಲ್ಲಿಯೂ ಇದ್ದಾರೆ. ಹೊಸ ಹೊಸ ರೀತಿಗಳಲ್ಲಿ ಯಾರನ್ನು ಹೇಗೆ ಸುಲಿಯಬಹುದೆಂದು ನಿತ್ಯವೂ ಪ್ರಯೋಗಗಳಲ್ಲಿ ತೊಡಗಿಕೊಂಡಿರುತ್ತಾರೆ. ಮೊನ್ನೆ ಖಾಸಗಿ ಬಸ್ಸೊಂದರಲ್ಲಿ ಆಗ ತಾನೆ ಪ್ರಯಾಣಿಸಿ ಬಂದಿದ್ದ ಹೆಣ್ಣುಮಗಳೊಬ್ಬಳು ಹೇಳಿಕೊಳ್ಳುತ್ತಿದ್ದಳು. "ಸ್ನೇಹಿತೆ ಜೊತೆ ಕುಳಿತಿದ್ದೆ ಸಾರ್... ಡೈರಿ ಸರ್ಕಲ್ಲಿನ ಬಳಿಯ ನಿಲ್ದಾಣದಲ್ಲಿ ನಾಲ್ಕೈದು ಹೆಂಗಸರು ಹತ್ತಿಕೊಂಡರು. ಸ್ವಲ್ಪ ಸ್ವಲ್ಪ ದೂರದಲ್ಲಿ ಸರಿದು ತಮ್ಮ ಪಾಡಿಗೆ ತಾವು ನಿಂತಿಕೊಂಡರು. ಸೀಟುಗಳು ಖಾಲಿಯಿದ್ದರೂ ಕೂರಬೇಕೆಂಬ ಉಮ್ಮೇದಿ ಇರಲಿಲ್ಲ. ಅವರಲ್ಲಿ ಒಬ್ಬಾಕೆ ಕೂಸೊಂದನ್ನು ಎತ್ತಿಕೊಂಡಿದ್ದಳು. ಅದು ಒಂದೇ ಸಮನೆ ಅಳುತ್ತಿತ್ತು. ಕುಳಿತ ಜನರ ಗಮನವೆಲ್ಲಾ ಅಳುತ್ತಿದ್ದ ಕೂಸಿನ ಕಡೆಯೇ... ಕಂಡಕ್ಟರನನ್ನು ಇದು ಮಾರ್ಕೆಟ್ ಹೋಗ್ತದೇನಪ್ಪಾ? ಅಂತ ಒಬ್ಬಾಕೆ ಕೇಳಿದಳು. ಅವನು ಗೋಣು ಆಡಿಸಿದ. ಬಹುಶಃ ಇವರ ಪರಿಚಯ ಅವನಿಗಿದ್ದಿರಬೇಕು ಅನಿಸ್ತದೆ. ಹಾಗಿದ್ದ ಮೇಲೆ ಮಾರ್ಕೆಟ್ ಕಡೆ ಹೋಗ್ತದಾ? ಅಂತ ಕೇಳಿದ ಉದ್ದೇಶ ಆಗ ನನಗೆ ಅರ್ಥವಾಗಲಿಲ್ಲ. ನಡುವೆ ಅಮ್ಮನ ಫೋನು ಬಂತು. ಹೌದಮ್ಮಾ... ಮುಂದಿನ ಸ್ಟಾಪಿನಲ್ಲಿ ಇಳಿಯುತ್ತಿದ್ದೇನೆಂದು ಅಮ್ಮನಿಗೆ ಹೇಳಿದೆ. ಇದ್ದಕ್ಕಿದ್ದಂತೆ ಅವರ ಚಲನವಲನಗಳಲ್ಲಿ ಬದಲಾವಣೆಗಳಾದವು. ಏ ರತ್ನಾ... ಇದು ಮಾರ್ಕೆಟ್‌ಗೆ ಹೋಗೋಲ್ಲವಂತೆ ಕಣೇ... ಅಂತ ಒಬ್ಬಳು ಇನ್ನೊಬ್ಬಳಿಗೆ ಹೇಳಿದಳು. ನನ್ನ ವ್ಯಾನಿಟಿ ಬ್ಯಾಗಿನಲ್ಲಿ ಮನೆ ಸಮಾರಂಭಕ್ಕೆಂದು ತಂದ ಒಡವೆಗಳಿದ್ದವು. ನಿಲ್ದಾಣ ಇನ್ನೂ ದೂರ ಇರುವಂತೆಯೇ ನನ್ನ ಪಕ್ಕ ನಿಂತಿದ್ದವಳ ಕೈಚೀಲದಿಂದ ಕೆಲ ನಾಣ್ಯಗಳು ನನ್ನ ಮೇಲೆ ತಟವಟನೆ ಸುರಿದವು. ಓ, ಸಾರಿಯಮ್ಮಾ... ಗಡಿಬಿಡೀಲಿ ಗೊತ್ತಾಗ್ಲಿಲ್ಲ... ಸ್ವಲ್ಪ ಎತ್ತಿಕೊಂಡುಬಿಡ್ತೇನೆ... ಅಂತ ಕೆಳಗೆ ಬಿದ್ದಿದ್ದ ಕೆಲವನ್ನ ಆಯ್ದುಕೊಂಡಳು. ಸ್ವಲ್ಪ ಎದ್ದೇಳಮ್ಮಾ, ನಿನ್ನ ಸೀಟಿನಡೀಲಿ ಕೆಲವು ಸಿಕ್ಕಿಕೊಂಡಿವೆ. ಅವನ್ನೂ ತಕ್ಕೊಂಡುಬಿಡ್ತೇನೆ ಅಂತ ರಿಕ್ವೆಸ್ಟು ಮಾಡಿಕೊಂಡಳು. ಪಾಪ ಬಡ ಹೆಂಗಸಲ್ವಾ... ಅಂದುಕೊಂಡು ಎದ್ದೆ... ಬಹುಶಃ ಅದೇ ನಾನು ಮಾಡಿದ ತಪ್ಪು ಅನ್ಸುತ್ತೆ ಸಾರ್...

ಮನೆಗೆ ಬಂದು ವ್ಯಾನಿಟಿ ಬ್ಯಾಗು ನೋಡಿಕೊಂಡ್ರೆ ಏನಿದೆ ಅಲ್ಲಿ?... ಇಟ್ಟುಕೊಂಡಿದ್ದ ಒಡವೆಗಳೆಲ್ಲಾ ಮಾಯವಾಗಿದ್ದವು. ಬಸ್‌ನಲ್ಲಿ ನಾನು ಗಮನಿಸುವುದಕ್ಕೇ ಆಗ್ಲಿಲ್ಲ. ರೂಮ್‌ನಲ್ಲಿ ಒಬ್ಳೇ ಬಾಗ್ಲು ಹಾಕ್ಕೊಂಡು ಕುಳಿತು ಎಲ್ಲವನ್ನೂ ಕಣ್ಮುಂದೆ ತಂದುಕೊಂಡೆ. ಎಲ್ಲಾ ಹೆಂಗಸರೂ ಬಸ್ಸು ಹತ್ತಿ ಅಲ್ಲಲ್ಲೇ ಸಾಲಾಗಿ ನಿಂತುಕೊಂಡಿದ್ದು... ಸೀಟುಗಳು